Crl.Misc.No.9/2025, RW-1

ಮುಬಾರಕ್ ತಂದೆ ಕಬೀರಸಾಬ

ದಿನಾಂಕ 16-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಶ್ರೀ ಕೆ.ಬಿ.ಎಮ್ ವಕೀಲರಿಂದ:-**

ನಾನು, ನಮ್ಮ ತಂದೆ-ತಾಯಿ ಮತ್ತು ಅಣ್ಣ-ತಮ್ಮಂದಿರು ಒಟ್ಟಿಗೆ ವಾಸವಾಗಿರುತ್ತೇವೆ ಎಂದರೆ ಸರಿಯಲ್ಲ. ಅವರು ಬೇರೆ ವಾಸವಾಗಿರುತ್ತಾರೆ. ನನಗಿಂತ ಮುಂಚೆ ಅಣ್ಣ ಮತ್ತು ತಮ್ಮನ ಮದುವೆಯಾಗಿರುತ್ತದೆ. ನಮ್ಮ ತಾಯಿ, ಅಣ್ಣ ಮತ್ತು ತಮ್ಮ ನನ್ನ ಮದುವೆಗೆ ಬಂದಿದ್ದರು. ಕೆ.ಕೆ.ಮ್ಯಾರೇಜ್ ಬ್ಯೂರೋ ಶಿವಮೊಗ್ಗದಲ್ಲಿ ನಾನು ಡಾಟಾ ಹಾಕಿ ಬಿಟ್ಟಿದ್ದೆ ಎಂದರೆ ಸರಿಯಲ್ಲ. 8317400337 ಇದು ನನ್ನ ಮೊಬೈಲ್ ನಂಬರ್ ಅಲ್ಲ. ನಮ್ಮ ಮೂಲ ವಿಳಾಸ ಬಾಗಲಕೋಟೆ ಎಂದು ತೋರಿಸಿರುತ್ತೇನೆ ಎಂದರೆ ಸರಿ. ಅದೇ ರೀತಿ ಬಾಗಲಕೋಟೆಯಲ್ಲಿ ಒಂದು ಮನೆ ಮತ್ತು 12 ಎಕರೆ ಹೊಲ ಇದೆ ಎಂದು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ತಿಂಗಳಿಗೆ ರೂ.40,000/- ಬರುತ್ತದೆ ಎಂದು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಭದ್ರಾವತಿಯಲ್ಲಿ ನೀಡಿದ ದೂರಿನಲ್ಲಿ ನಾನು ಕಾರು ಚಾಲಕ ಎಂದು ಬರೆಸಿರುತ್ತೇನೆ ಎಂದರೆ ಸರಿ. ನಾನು ಕಾರು ಚಾಲಕ ಕೆಲಸವನ್ನು ಬಿಟ್ಟು 4-5 ವರ್ಷಗಳಾಗಿರುತ್ತವೆ. ನಾನು ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾನು ಈಗ ಕೂಲಿ ಕೆಲಸ ಮಾಡುತ್ತಿದ್ದು ತಿಂಗಳಲ್ಲಿ 8-10 ದಿನ ಕೆಲಸ ಇದ್ದು ದಿನಕ್ಕೆ ರೂ.250/- ರಿಂದ 300/- ಕೂಲಿ ಕೊಡುತ್ತಾರೆ. ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದು ತಿಂಗಳಿಗೆ ರೂ.50,000/- ಸಂಬಳ ಪಡೆಯುತ್ತಿದ್ದೇನೆ ಎಂದರೆ ಸರಿಯಲ್ಲ. 12 ಎಕರೆಯಿಂದ ಸುಮಾರು ವಾರ್ಷಿಕ ರೂ.10,00,000/- ಬರುತ್ತದೆ ಎಂದರೆ ಸರಿಯಲ್ಲ. ಜಮೀನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರು ಮದುವೆಯಾದ ದಿನದಿಂದಲೇ ನನಗೆ ರೂ.5,00,000/- ಇಲ್ಲದಿದ್ದರೆ ನಿನ್ನ ಮೇಲೆ ದೂರು ಕೊಡುತ್ತೇನೆ ಎಂದು ಹೇಳಿರುತ್ತಾಳೆ. ರೂ.5,00,000/- ಕೇಳಿದ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ. ಮದುವೆ ದಿನದಂದೆ 5 ಲಕ್ಷ ಕೇಳಿರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರಳು ನಮ್ಮ ಜೊತೆ ಒಂದುವರೆ ತಿಂಗಳು ಜೀವನ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ಅರ್ಜಿದಾರಳನ್ನು ತವರು ಮನೆಯವರು ಕರೆದುಕೊಂಡು ಹೋಗಿ ವಾಪಸ್ಸು ಗಂಡನ ಮನೆಗೆ ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ.

3. ನಮ್ಮ ಮನೆ ಭದ್ರಾವತಿಯ ಅನ್ವರ್ ಕಾಲೋನಿಯಲ್ಲಿದೆ ಎಂದರೆ ಸರಿ. ನಾವು ವೃತ್ತ ಕಾಲೋನಿಯಲ್ಲಿದ್ದು ನಂತರ ಸಾದತ್ ಕಾಲೋನಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದೇವು. ಅಲ್ಲಿ 15-20 ದಿನ ಗಂಡ-ಹೆಂಡತಿ ಜೀವನ ಮಾಡಿರುತ್ತೇವೆ ಎಂದರೆ ಸರಿ. ಸಾದತ್ ಕಾಲೋನಿಯಲ್ಲಿ ನಮ್ಮ ತಾಯಿ ಮತ್ತು ಅಣ್ಣ-ತಮ್ಮಂದಿರು ಬೇರೆ ಮನೆಯಲ್ಲಿ ಬಂದು ವಾಸವಿದ್ದರು ಎಂದರೆ ಸರಿಯಲ್ಲ. ದಿನಾಂಕ 18-09-2022 ರಂದು ನಾನೇ ಟಿಕೇಟ್ ತೆಗೆಯಿಸಿ ಅರ್ಜಿದಾರಳನ್ನು ಶಿವಮೊಗ್ಗದಿಂದ ಮಾನ್ವಿಗೆ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರಳು ತವರು ಮನೆಗೆ ಬಂದಾಗಿನಿಂದ ನಾವು ಕರೆಯದೆ ನಿರ್ಲಕ್ಷ್ಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾವು ತವರು ಮನೆಯವರನ್ನು ಕರೆದುಕೊಂಡು ಬಾ ಎಂದು ಹೇಳಿರುತ್ತೇವೆ. ನಾನು ನಿಮ್ಮ ಮಗಳನ್ನು ಕರೆದುಕೊಂಡು ಬರಬೇಕಾದರೆ ರೂ.5,00,000/- ತರಬೇಕು ಎಂದು ಒತ್ತಾಯಿಸಿ ಪೋನ್ ಕಟ್ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಭದ್ರಾವತಿ ಕಮೀಟಿಯಲ್ಲಿ ಅರ್ಜಿದಾರಳು ಮತ್ತು ಅವರ ಕುಟುಂಬದವರು ಜಮಾತಿನಲ್ಲಿಮಾತುಕತೆ ಆಡಲು ಬಂದಿದ್ದರು ಎಂದರೆ ಸರಿಯಲ್ಲ. ಆ ದಿನ ನನಗೆ ಮತ್ತು ನನ್ನ ಕುಟುಂಬದವರಿಗೆ ಕರೆಸಿದ್ದು ನಾವು ಅವರಿಗೆ ಗೌರವ ಕೊಡದೆ ಎದ್ದು ಹೋಗಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕ 03-07-2023 ರಂದು ನಾವು ಅರ್ಜಿದಾರಳನ್ನು ಮಾತುಕತೆ ಆಡಲು ಬನ್ನಿ ಎಂದು ಕರೆದಿರುತ್ತೇವೆ ಎಂದರೆ ಸರಿಯಲ್ಲ. ಅರ್ಜಿದಾರಳು ಭದ್ರಾವತಿಗೆ ಬಂದರೂ ಅವರಿಗೆ ಕಿಮ್ಮತ್ತು ಕೊಡದೆ ಅವಾಚ್ಯ ಶಬ್ದಗಳಿಂದ ಬೈದು ವಾಪಸ್ಸು ಕಳಿಸಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕ 05-07-2023 ರಂದು ನಾನು ಅರ್ಜಿದಾರಳಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ಕೊಟ್ಟ ಬಗ್ಗೆ ದೂರು ಕೊಟ್ಟಿರುತ್ತಾಳೆ ಎಂದರೆ ಸರಿ. ಸದರಿ ಕೇಸಿನಲ್ಲಿ ಪೋಲಿಸರು ಅಂತಿಮ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ನಿರಪರಾದಿಗಳು ಎಂದು ಕೇಸು ಮುಕ್ತಾಯವಾಗಿದೆ ಎಂದು ನುಡಿಯುತ್ತಾರೆ.

4. ಅರ್ಜಿದಾರಳು ಲಿಂಗಸುಗೂರಿನ ಮಹಿಳಾ ಸಾಂತ್ವನ ಕೇಂದ್ರಕ್ಕೆ ಅರ್ಜಿ ಕೊಟ್ಟಿದ್ದಳು ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರಳು ಕೋರ್ಟಿಗೆ ಹೋಗಲಿ ಎಂದು ಸಾಂತ್ವನ ಕೇಂದ್ರದಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಪೋಟೊ ಹಾಜರು ಪಡಿಸಿದ ಬಗ್ಗೆ ಸಿ.ಡಿ.ಯನ್ನು ಹಾಜರು ಪಡಿಸಿರುತ್ತೇನೆ. ಪೋಟೋಗಳನ್ನು ಯಾವ ಮೊಬೈಲಿನಿಂದ ಯಾವ ಮೊಬೈಲಿಗೆ ಡೌನಲೋಡ್ ಮಾಡಿಕೊಂಡಿದ್ದೇವೆ ಎಂದು ಮತ್ತು ಯಾವ ಕಂಪ್ಯೂಟರಿನಿಂದ ಸಿ.ಡಿ. ತಯಾರಿಸಿದ್ದೇವೆ ಎಂದು ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ. ಈ ಪೋಟೋಗಳನ್ನು ಬೆಂಗಳೂರಿನಲ್ಲಿ ನವೆಂಬರ್-2022 ರಲ್ಲಿ ತೆಗೆದಿರುತ್ತಾರೆ. ದಿನಾಂಕ ಮತ್ತು ಸಮಯ ನೆನಪಿರುವುದಿಲ್ಲ. ಅರ್ಜಿದಾರಳೆ ಈ ಎಲ್ಲಾ ಪೋಟೋಗಳನ್ನು ನನ್ನ ಮೊಬೈಲಿಗೆ ಕಳುಹಿಸಿ ಇವರೆಲ್ಲಾ ನನ್ನ ಬಾಯ್ ಪ್ರೆಂಡ್ಸ್ ಏನು ಮಾಡಿಕೊಳ್ಳುತ್ತಿಯಾ ಎಂದು ಹೇಳಿರುತ್ತಾಳೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಎಲ್ಲಾ ಪೋಟೋಗಳು ನೈಜ ಪೋಟೋಗಳು ಅಲ್ಲ ಕಂಪ್ಯೂಟರ್ ಎಡಿಟ್ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಮೇಲೆ ದ್ವೇಷ ಇರುವುದರಿಂದ ಅವರ ಮಾನಹರಣ

ಮಾಡಲು ಈ ಎಲ್ಲಾ ಫೋಟೋಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರಳ ಜೊತೆಗೆ ನಾನು ಜೀವನ ಮಾಡಲು ನಿರ್ಲಕ್ಷ್ಯ ಮಾಡಿರುತ್ತೇನೆ ಎಂದರೆ ಸರಿಯಲ್ಲ.

5. ನನಗೆ ಜಮೀನು ಮತ್ತು ಕೆಲಸದಿಂದ ಸಾಕಷ್ಟು ಆದಾಯ ಬರುತ್ತಿದ್ದು ಅರ್ಜಿದಾರಳಿಗೆ ಜೀವನಾಂಶ ಕೊಡುವ ಸಾಮರ್ಥ್ಯ ಇದೆ ಎಂದರೆ ಸರಿಯಲ್ಲ. ಜೀವನಾಂಶ ಕೊಡುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಆದಾಯ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)*

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.